ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು–1

ಸಂಖ್ಯೆ ತ(1) ತ.ಪ.ಮಾ/ಕ.ತ.ಹ/73/2019–20 ದಿನಾಂಕ 24/12/2020

### ಜ್ಞಾಪನಾ

ವಿಷಯ: 2019–20 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಕಛೇರಿ/ಶಾಲೆಗಳ ವಾರ್ಷಿಕ ತಪಾಸಣೆಯ ವರದಿಗಳೊಂದಿಗೆ ಹಾಜರಾಗುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಪತ್ರ ಸಂಖ್ಯೆ: ತ(1) ತ.ಪ.ಮಾ/ಕ.ತ.ಹ/73/2019–20 ದಿ 06–06–2019

2. ಈ ಕಛೇರಿ ಪತ್ರ ಸಂಖ್ಯೆ: ತ(1) ತ.ಪ.ಮಾ./ಕ.ತ.ಹ./73/2019–20 ದಿನಾಂಕ: 16–10–2020

– – – –

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕಛೇರಿಗಳಲ್ಲಿನ ಇಲಾಖಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಹಾಗೂ ಆಡಳಿತವನ್ನು ಸಮರ್ಪಕವಾಗಿ ನಡೆಸುತ್ತಿರುವ ಬಗ್ಗೆ ಪರಿಶೀಲಿಸಿ ಮಾರ್ಗದರ್ಶನ ನೀಡಲು ಕಾಲಕಾಲಕ್ಕೆ ತಪಾಸಣೆಯನ್ನು ಕೈಗೊಳ್ಳಲು ತಿಳಿಸಲಾಗಿತ್ತು.

ಬೆಂಗಳೂರು ವ್ಯಾಪ್ತಿಯಲ್ಲಿನ ಅಧಿಕಾರಿಗಳಿಗೆ ಈ ಕಛೇರಿಯಿಂದ ತಪಾಸಣೆಗಾಗಿ 2019–20 ನೇ ಸಾಲಿನಲ್ಲಿ ಉಲ್ಲೇಖ (1)ರಲ್ಲಿ ಅಧಿಕಾರಿಗಳಿಗೆ ಕಛೇರಿಗಳನ್ನು ಹಂಚಿಕೆ ಮಾಡಲಾಗಿತ್ತು. ಸದರಿ ತಪಾಸಣಾಗೆ ಸಂಬಂದಿಸಿದಂತೆ ಉಲ್ಲೇಖ (2)ರಲ್ಲಿ ತಪಾಸಣಾ ವರದಿಗಳನ್ನು ನೀಡಲು ತಿಳಿಸಲಾಗಿತ್ತು. ಹಾಗೂ ತಪಾಸಣೆ ಪೂರೈಸದಿದ್ದಲ್ಲಿ ಸಹ ವರದಿ ನೀಡಲು ಕೋರಲಾಗಿತ್ತು. ಸುಮಾರು ಎರಡು ತಿಂಗಳು ಕಳೆದರೂ ಸಹಾ ಈವರೆಗೆ ತಪಾಸಣಾ ವರದಿಗಳು ತಪಾಸಣಾ ಶಾಖೆಗೆ ಸಲ್ಲಿಸಿರುವುದಿಲ್ಲ. ಮಾನ್ಯ ಆಯುಕ್ತರ ಆದೇಶದಂತೆ ಹಂಚಿಕೆ ಮಾಡಲಾದ ಕಛೇರಿಗಳ ತಪಾಸಣಾ ವರದಿಗಳನ್ನು ನೀಡದೆ ಇರುವ ಬಗ್ಗೆ ಮಾನ್ಯ ಆಯುಕ್ತರು ಗಂಭೀರವಾಗಿ ಪರಿಗಣಿಸಿರುತ್ತಾರೆ. ಹಾಗೂ ಈ ಸಂಬಂಧ ಈಗಾಗಲೇ ಅಧೀನ ಕಛೇರಿಗಳಿಗೆ ಸಿ.ಸಿ.ಎ ನಿಯಮದಡಿಯಲ್ಲಿ ಶಿಸ್ತು ಕ್ರಮ ಜರುಗಿಸುವುದು ಅನಿವಾರ್ಯವಾಗಿರುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಮೇಲಿನ ವಿಚಾರದಲ್ಲಿ ದಿನಾಂಕ 02–01–2021 ರಂದು 11–00 ಘಂಟೆಗೆ ಆಯುಕ್ತರ ಕಛೇರಿಯ ಸಭಾಂಗಣದಲ್ಲಿ ಸಭೆಯನ್ನು ಕರೆಯಲಾಗಿದೆ. ಈ ಸಂಬಂಧ ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಸಹಾಯಕ ನಿರ್ದೇಶಕರು ಅಥವಾ ಪತ್ರಾಂಕಿತ ಸಹಾಯಕರು ಅಥವಾ ಪತ್ರಾಂಕಿತ ವ್ಯವಸ್ಥಾಪಕರು/ಸಹಾಯಕ ನಿರ್ದೇಶಕರು ಅಥವಾ ಅಧೀಕ್ಷಕರು ತಪ್ಪದೇ ಹಾಜರಾಗಿ ತಪಾಸಣಾ ವರದಿಗಳನ್ನು ಸಲ್ಲಿಸಲು ನಿರ್ದೇಶನ ನೀಡಲು ಕೋರಿದೆ.

24.12.20

~~ಸಹ~~ ನಿರ್ದೇಶಕರು (ಶಾಲಾಶಿಕ್ಷಣ)
ಆಯುಕ್ತರ ಕಛೇರಿ
ಬೆಂಗಳೂರು

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
2. ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ವಿಭಾಗ ಮೈಸೂರು
3. ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಗ್ರಾಮಾಂತರ ಜಿಲ್ಲೆ
4. ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ____________
5. ಉಪ ನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ____________
6. ಕಛೇರಿ ಪ್ರತಿ